1ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 949/2023**

ಚಾಸಾ - 1

**ಪ್ರಾ.ಸಾ. - 3**

**ಸಾಕ್ಷಿದಾರರ ಹೆಸರು** : ಪ್ರವೀಣ ಟಿ ಕೋಟಿ

**ಸಾಕ್ಷಿದಾರರ ವಯಸ್ಸು** : 31 ವರ್ಷ

**ಸಾಕ್ಷಿದಾರರ ಉದ್ಯೋಗ**: ಪಿ ಎಸ್ ಐ

**ಸಾಕ್ಷಿದಾರರ ವಿಳಾಸ** : ಧಾರವಾಡ ಗ್ರಾಮೀಣ ಪೋಲಿಸ ಠಾಣೆ

**ಪ್ರಮಾಣ ವಚನ ಮಾಡಿದ ದಿನಾಂಕ : 16.10.2025.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ**

2023 ರಲ್ಲಿ ದೊಡ್ಡವಾಡ ಪೋಲಿಸ ಠಾಣೆಯಲ್ಲಿ ಪಿ ಎಸ್ ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದೆ. ದಿ. 23.03.2023 ರಂದು ನಾನು ಠಾಣೆಯಲ್ಲಿದ್ದಾಗ 14.00 ಗಂಟೆಗೆ ಗೋವಿನಕೊಪ್ಪ ಗ್ರಾಮದ ಗಾವಠಾಣಾ ನೀರಿನ ಟ್ಯಾಂಕನ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಾ ಇದ್ದಾನೆ ಎಂದು ಮಾಹಿತಿ ಬಂತು. ಸದರಿ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಮಾರ್ಗದರ್ಶನ ಪಡೆದು ಠಾಣಾ ಸಿಬ್ಬಂದಿಗಳಾದ ಚಾಸಾ 4 ರಿಂದ 6 ರವರನ್ನು ಕರೆದು ಅವರಿಗೆ ಮಾಹಿತಿ ತಿಳಿಸಿ , ಚಾಸಾ 6 ರವರಿಗೆ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದೆನು. ಸದರಿಯವರು ನನ್ನ ಮುಂದೆ ಇಬ್ಬರು ಪಂಚರನ್ನು ಚಾಸಾ 2 ಮತ್ತು 3 ರವರನ್ನು ಹಾಜರುಪಡಿಸಿದರು. ಸದರಿಯವರಿಗೆ ಮಾಹಿತಿ ತಿಳಿಸಿ ಪಂಚರಾಗಲು ಕೇಳಿದಾಗ ಅವರು ಒಪ್ಪಿ ಕೊಂಡರು. 02.20 ಗಂಟೆಗೆ ಠಾಣೆಯಿಂದ ಪಂಚರು , ಸಿಬ್ಬಂದಿಯೊಂದಿಗೆ ತನಿಖಾ ಸಾಮಾಗ್ರಿಗಳೊಂದಿಗೆ ಪೋಲಿಸ ಜೀಪ್ ನಂಬರ್ ಕೆ ಎ 22 ಜಿ 620 ರಲ್ಲಿ ಮಾಹಿತಿ ಬಂದ ಸ್ಥಳಕ್ಕೆ 02.50ಕ್ಕೆ ಹೋದೆವು. ಸದರಿ ಮಾಹಿತಿ ಬಂದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಕೆಳಗೆ ಇಳಿದು ವಾಚ್ ಮಾಡಿದೆವು. ಆಗ ಗೋವಿನಕೊಪ್ಪ ಗ್ರಾಮದ ಗಾವಠಾಣಾ ನೀರಿನ ಟ್ಯಾಂಕನ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ಹಳದಿ ಬಣ್ಣದ ಪ್ಲಾಸ್ಟಿಕ್ ಗೊಬ್ಬರ ಚೀಲವನ್ನು ಹಿಡಿದು ನಿಂತಿದ್ದ ಅವನ ಸುತ್ತಾಮುತ್ತಾ 2-3 ಜನ ನಿಂತಿದ್ದರು. ಅಲ್ಲಿ ಆತನು ಹಣ ಪಡೆದು ಬ್ಯಾಗ್

ನಿಂದ ಏನೋ ವಸ್ತುವನ್ನು ಕೊಡುವುದನ್ನು ಮಾಡುತ್ತಾ ಇದ್ದ.  ಅವರ ಹಾವಭಾವ ನೋಡಿ ಮಾಹಿತಿ ಬಂದ ವ್ಯಕ್ತಿ ಅವನೇ ಎಂದು ಖಚಿತವಾಗಿ, 03.00 ಕ್ಕೆ ದಾಳಿ ಮಾಡಿದೆವು. ಗೊಬ್ಬರದ ಚೀಲವನ್ನು ಹಿಡಿದುಕೊಂಡು ನಿಂತವನನ್ನು ನಾನು ಹಿಡಿದೆ. ಅವನ ಮುಂದೆ ನಿಂತಿರುವವರು ಓಡಿ ಹೋದರು. ಅವರನ್ನು ನಮ್ಮ ಸಿಬ್ಬಂದಿ ಬೆನ್ನತ್ತಿದರು ಅವರು ಸಿಗಲಿಲ್ಲ. ನಾನು ಹಿಡಿದು ನಿಂತು ಕೊಂಡವನ ಹೆಸರು ಕೇಳಲಾಗಿ ಆತ ತನ್ನ ಹೆಸರು ಸಿದ್ದಲಿಂಗಯ್ಯ ಗುರುವಯ್ಯ ಗಿಡಮೂದಿ ಎಂದನು.  ಪಂಚರ ಸಮಕ್ಷಮ ಚೀಲದಲ್ಲಿ ಏನು ಇದೆ ಎಂದು ನೋಡಿದಾಗ ಅದರಲ್ಲಿ ಮಧ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳು ಇದ್ದವು. ಆತನನ್ನು ಸದರಿ ಮಧ್ಯವನ್ನು ಎಲ್ಲಿಂದ ತಂದಿರುತ್ತೀರಿ ಹಾಗೂ ಮಾರಾಟ ಮಾಡಲು ಪರವಾನಗೆ ಇದೆಯಾ ಎಂದು ಕೇಳಲಾಗಿ ಸಮರ್ಪಕ ಉತ್ತರ ನೀಡಲಿಲ್ಲ. ಆತನನನ್ನು ಪರಿಶೀಲನೆ ಮಾಡಿದಾಗ ಚೀಲದಲ್ಲಿ 90 ಎಮ್ ಎಲ್ ನ ಓರಿಜಿನಲ್ ಚಾಯ್ಸ ಡೀಲಕ್ಸ ವಿಸ್ಕಿ 60 ಇದ್ದವು ಹಾಗೂ ಅವನ ಬಳಿ 150/- ರೂ. ಇದ್ದವು. ಎಲ್ಲಾ ಟೆಟ್ರಾ ಪ್ಯಾಕೆಟ್ ಗಳನ್ನು  ಪರಿಶೀಲನೆ ಕಳುಹಿಸುವ ಸಲುವಾಗಿ ಪಂಚರ ಸಮಕ್ಷಮ ಅವುಗಳನ್ನು ಜಪ್ತಿ ಮಾಡಿ ಬಟ್ಟೆ ಸುತ್ತಿ ಸೀಲ್ ಮಾಡಿ ನಮ್ಮ ಹಾಗೂ ಪಂಚರ ಸಹಿ ಇರುವ ಚೀಟಿ ಮಾಡಿ ಅಂಟಿಸಿದೆವು. ಇನ್ನುಳಿದ ಮು. ಮಾ.ನ್ನು ಪಂಚರ ಸಮಕ್ಷಮ ನಮ್ಮ ವಶಕ್ಕೆ ಪಡೆಸಿಕೊಂಡೆವು. ದಾಳಿ ಪಂಚನಾಮೆಯನ್ನು 03.00 ಗಂಟೆಯಿಂದ 04.00 ಗಂಟೆವರೆಗೂ ಸ್ದಳದಲ್ಲಿಯೇ ಟೈಪ್ ಮಾಡಲಾಯಿತು. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು  ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ಮು. ಮಾ. ಹಾಗೂ  ಆರೋಪಿ ಹಾಗೂ ಪಂಚನಾಮೆಯಾಂದಿಗೆ ಠಾಣೆಗೆ  ಹಾಜರಾಗಿ ಸರ್ಕಾರಿ ತೆರಪಿಗೆ ದೂರು ನೀಡಿದೆನು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 2ಎ ಎಂದು ಗುರುತಿಸಲಾಯಿತು.  ಸಾಕ್ಷಿ ಜಪ್ತಿ ಮಾಡಿದ ಮು. ಮಾಲನ್ನು ನೋಡಿ ಗುರುತಿಸುವರು. ಅವುಗಳನ್ನು ಕ್ರಮವಾಗಿ ಓರಿಜಿನಲ್ ಚಾಯ್ಸ ಡೀಲಕ್ಸ ವಿಸ್ಕಿ 62 ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು. ಮಾಲು 1 ಎಂದು, 150/- ರೂ.  ನ್ನು ನೋಡಿ ಗುರುತಿಸಿದ್ದು ಅದನ್ನು ಮು. ಮಾಲು 2 ಎಂದು , ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು ಮು. ಮಾ 3 ಎಂದು ಗುರುತಿಸಲಾಯಿತು ಆರೋಪಿಯನ್ನು ನೋಡಿ ಗುರುತಿಸುವರು.

ಪಾಟೀ **ಸವಾಲುಃ ಆರೋಪಿ ಪರ ವಕೀಲರಿಂದ ಃ**

ಮಾಹಿತಿ ಬಂದ ಕೂಡಲೇ **1-2** ನಿಮಿಷದಲಿಯೇ ಮೇಲಾದಿಧಕಾರಿಗಳಿಗೆ ತಿಳಿಸಿರುತ್ತೇನೆ. ಮಾಹಿತಿ ಬಂದಾಗ ನಾನು ಠಾಣೆಯಲ್ಲಿದ್ದೆ. ನಮ್ಮ ಸಿಬ್ಬಂದಿಗಳು ಸಹ ಠಾಣೆಯಲ್ಲಿದ್ದರು. ಅವರಿಗೂ ಸಹ ಅವಾಗಲೇ ತಿಳಿಸಿರುತ್ತೇನೆ. ಚಾಸಾ **6** ರವರು ಪಂಚರನ್ನು ಕರೆದುಕೊಂಡು ಬಂದರು. ಪಂಚರನ್ನು ಎಲ್ಲಿಂದ ಕರೆದುಕೊಂಡು ಬಂದರು ಎಂದು ವಿಚಾರಣೆ ಮಾಡಿರುವುದಿಲ್ಲ. ಪಂಚರನ್ನು ಠಾಣೆಗೆ ಕರೆದುಕೊಂಡು ಬಂದರು. ಪಂಚರ ಹೆಸರನ್ನು ದೂರಿನಲ್ಲಿ ಬರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ದೂರಿನಲ್ಲಿ ಪಂಚನಾಮೆಯನ್ನು ಲಗತ್ತಿಸಿಕೊಟ್ಟ ಕಾರಣ ಅಗತ್ಯ ಇರಲಿಲ್ಲ ಎನ್ನುತ್ತಾರೆ. ಪಂಚರು **02.10** ರಿಂದ **2.18** ರ ಅವಧಿಯೊಳಗೆ ಠಾಣೆಗೆ ಬಂದಿರುತ್ತಾರೆ. ಠಾಣಾ ಡೈರಿಯಲ್ಲಿ ದಾಳಿಗೆ ಹೋಗುವ ಬಗ್ಗೆ ನಮೂದಿಸಿರುತ್ತೇವೆ. ಸದರಿ ದಾಖಲೆಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿ ಸದರಿ ದಾಖಲೆ ಠಾಣೆಯಲ್ಲಿರುತ್ತದೆ ಎನ್ನುತ್ತಾರೆ. ನಿಮಗೆ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತನಿಖಾಧಿಕಾರಿಗಳು ಬೇಕಾದರ ಅಳವಡಿಸಿಕೊಳ್ಳಬಹುದಾಗಿತ್ತು ಎನ್ನುತ್ತಾರೆ. ಠಾಣೆ ಬಿಟ್ಟಾಗ ಸಮಯ **02.20** ಆಗಿತ್ತು. ಠಾಣೆಯಿಂದ ಘಟನಾ ಸ್ಥಳಕ್ಕೆ ಗೋವಿನಕೊಪ್ಪಕ್ಕೆ ಯಾವ ಮಾರ್ಗದಲ್ಲಿ ಹೋಗಿರುತ್ತೀರಿ ಎಂದರೆ ಸಾಕ್ಷಿ ದೊಡ್ಡವಾಡದಿಂದ ಒಳಗಡೆ ಮಾರ್ಗದಿಂದ ಹೋಗಿರುತ್ತೇವೆ ಎನ್ನುತ್ತಾರೆ. ಠಾಣೆಯಿಂದ ಘಟನಾ ಸ್ಥಳ **4-5** ಕಿ.ಮೀ ದೂರದಲ್ಲಿರುತ್ತದೆ. ನೀವು ಯಾವ ಮಾರ್ಗದಿಂದ ಘಟನಾ ಸ್ಥಳಕ್ಕೆ ಹೋಗಿರುತ್ತೀರಿ ಎಂದು ನಿಮ್ಮ ದೂರಿನಲ್ಲಿ ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ಘಟನಾ ಸ್ಥಳದಿಂದ **40** ರಿಂದ **50** ಮೀ ಅಂತರದಲ್ಲಿ **10** ನಿಮಿಷ ನಿಂತು ವಾಚ್ ಮಾಡಿದೆವು. ನೀವು ಬಹಳ ದೂರು ನಿಂತು ವಾಚ್ ಮಾಡುತ್ತಾ ಇರಲಿಲ್ಲ ಆರೋಪಿ ಹಾಗೂ ಇತರರಿಗೂ ಗೊತ್ತಾಗುತ್ತಾ ಇತ್ತು ಎಂದರೆ ಸಾಕ್ಷಿ ಮರೆಯಾಗಿ ನಿಂತಿದ್ದೆವು. ಆರೋಪಿ ಹೊರತು ಪಡಿಸಿ **2-3** ಜನ ಇದ್ದರು. ಆರೋಪಿಯನ್ನು ಮೊದಲೇ ನಾನೇ ಹಿಡಿದಿರುತ್ತೇನೆ. ಘಟನಾ ಸ್ಥಳದ ಸಮೀಪ ಸಾಕಷ್ಟು ಮನೆಗಳು ಇರುತ್ತವೆ. ಹಾಗೂ ಜನರು ಇರುತ್ತಾರೆ ಎಂದರೆ ಸರಿ. ಓಡಿ ಹೋದವರ ಬಗ್ಗೆ ಸ್ಥಳೀಯರಲ್ಲಿ ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸ್ಥಳದಲ್ಲಿ ಇದ್ದವರನ್ನು ಪ್ರತ್ಯಕ್ಷ ಸಾಕ್ಷಿದಾರರು ಎಂದು ತೆಗೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾವು ಪಂಚನಾಮೆ ಮಾಡುವ ಸಮಯದಲ್ಲಿ ಸಾಕ್ಷಿ ಹೇಳುವವರು ಯಾರು ಇರಲಿಲ್ಲ.

ಸದರಿ ರೀತಿ ದೂರಿನಲ್ಲಾಗಲಿ, ಪಂಚನಾಮೆಯಲ್ಲಾಗಲಿ ಬರೆದಿರುವುದಿಲ್ಲ ಎಂದರೆ ಸರಿ. ಹಳದಿ ಬಣ್ಣದ ಚೀಲವಾಗಿದ್ದು ಅದರ ಮೇಲೆ ಏನು ಬರೆದಿತ್ತು ಎಂದು ನೆನಪಿಲ್ಲ. ಅದರ ಬಗ್ಗೆ ದೂರಿನಲ್ಲಿ ಹಾಗೂ ಪಂಚನಾಮೆಯಲ್ಲಿ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಮಧ್ಯ ಪ್ರಮುಖವಾಗಿದ್ದ ಕಾರಣ ಚೀಲದ ಬಗ್ಗೆ ನಮೂದಿಸಿರುವುದಿಲ್ಲ ಎನ್ನುತ್ತಾರೆ. ಮು. ಮಾ. 3 ರ ಅದೇ ರೀತಿ ಚೀಲಗಳು ಎಲ್ಲಾ ಅಂಗಡಿಗಳಲ್ಲಿಯೂ ಸಿಗುತ್ತವೆ ಎಂದರೆ ಸರಿ. ಟೆಟ್ರಾ ಪ್ಯಾಕೇಟನ್ನು ಬ್ಯಾಚ್ ನಂಬರ ಹಾಗೂ ತಯಾರಿಕೆಯ ದಿನ ಹೇಳಲಾಗುವುದಿಲ್ಲ. ಆರೋಪಿಯಿಂದ ಜಪ್ತಿ ಮಾಡಿದ 150/- ರೂ. ಗಳ ಮುಖಬೆಲೆ ನೆನಪಿರುವುದಿಲ್ಲ. ಪಂಚನಾಮೆಯನ್ನು 03.00 ರಿಂದ 04.00 ಗಂಟೆ ಅವಧಿಯಲ್ಲಿ ಮಾಡಿರುತ್ತೇವೆ. ಪಂಚನಾಮೆಯನ್ನು ಚಾಸಾ 5 ರವರು ಟೈಪ್ ಮಾಡಿರುತ್ತಾರೆ. ದೂರನ್ನು ಠಾಣೆಗೆ ಬಂದ ನಂತರ ನಾನು ಹೇಳಿ ಚಾಸಾ 5 ರವರ ಕಡೆಯಿಂದ ಚಾಸಾ 5 ರವರ ಕಡೆಯಿಂದ ಟೈಪ್ ಮಾಡಿಸಿರುತ್ತೇನೆ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮು. ಮಾಲಗೂ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶದ ಸಲುವಾಗಿ ಸುಳ್ಳು ದೂರು ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ